ಹುಟ್ಟೂರು ಹುಬ್ಬಳ್ಳಿಯಾದರೂ ನಾಗಾ. ಎಚ್. ಹುಬ್ಳಿಯವರು ದೇಶದ ವಿವಿಧೆಡೆಗಳಲ್ಲಿ ಕೆಲಸ ಮಾಡಿದವರು. ಅಧ್ಯಯನಕ್ಕಾಗಿ ಜಾರ್ಖಂಡ್, ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಡ, ನಿಕೋಬಾರ್ ದ್ವೀಪ, ಉತ್ತರಾಖಂಡ ಮುಂತಾದ ರಾಜ್ಯಗಳ ಆದಿವಾಸಿಗಳ ನೆಲೆಗಳಿಗೆ ಭೇಟಿ ಕೊಟ್ಟು ಅವರ ಕುರಿತು ಜನಾಂಗೀಯ ಅಧ್ಯಯನ ನಡೆಸಿದವರು. ಆ ಕುರಿತು ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಓದಿದ್ದು ಪತ್ರಿಕೋದ್ಯಮ. ಪ್ರಸ್ತುತ ಜಾರ್ಖಂಡ್‌ನ ರಾಂಚಿ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರು.

ನೆನಪಿಸಿಕೊಳ್ಳುವ ಪ್ರಯತ್ನ ನಡೆಸತೊಡಗಿದೆ. ಇಲ್ಲ... ನಾನು ಇದಕ್ಕಿಂತ ಮೊದಲು ಎಲ್ಲಿಯೂ ಆತನನ್ನು ನೋಡಿಲ್ಲ ಮತ್ತು ಆತ ಹೆಸರಿಸಿದ 'ಅಮರ್ ಸಿಂಗ್' ಹೆಸರನ್ನು ಕೇಳಿಯೂ ಇಲ್ಲ. ಆದರೆ ನನ್ನ ಪರಿಚಯ ಈ ವ್ಯಕ್ತಿಗೆ ಇರುವುದಾದರೂ ಹೇಗೆ? ತಕ್ಷಣವೇ ನನಗೆ 'ರಾಶಿಫಲ' ನೆನಪಾಯಿತು. 'ಯಾರಿಗೆ ಗೊತ್ತು ಯಾವ ವೇಷದಲ್ಲಿ ಮಿತ್ರ ಲಾಭವಾಗುತ್ತದೆಯೋ!' ಆ ಕಾರಣದಿಂದಾಗಿಯೇ ನಾನು ಸುಮ್ಮನಾದೆ.

ನನಗೆ ಪಾನ್ ಕೊಡುತ್ತ ಆತ ಹೇಳಿದ, "ನೀವು ಮಹಾಕಾವ್ಯವೊಂದನ್ನು ಬರೆಯುವುದಕ್ಕೆ ಆರಂಭಿಸಿದ್ದೀರಿ ಎಂದು ಅಮರ್ ಸಿಂಗ್ ಹೇಳುತ್ತಿದ್ದರು. ಅದಕ್ಕೆ ಏನು ಹೆಸರು ಇಟ್ಟಿದ್ದೀರಿ? ಹೇಗೆ ನಡೆಯುತ್ತಿದೆ ಅದರ ಬರವಣಿಗೆ? ಆದಷ್ಟು ಬೇಗ ಬರೆದು ಮುಗಿಸಿಬಿಡಿ..."

ಆತ ಪಾನ್ ಕೈಗೆತ್ತಿಕೊಂಡು ಬಾಯಿಗೆ ಹಾಕಿಕೊಂಡ. ನಿಧಾನವಾಗಿ ಅದನ್ನು ಜಗಿಯತೊಡಗಿದ. ಆತನೀಗ ಸ್ವಲ್ಪ ಹೊತ್ತಾದರೂ ಮಾತನಾಡುವುದಿಲ್ಲ ಎನ್ನುವುದು ನನಗೆ ತಿಳಿಯಿತು. ನಾನು ಕಂಪಾರ್ಟ್ಮೆಂಟ್‌ನ ಸುತ್ತಲೂ ನೋಡಿದೆ. ಅಲ್ಲಿ ಕುಳಿತಿದ್ದವರೆಲ್ಲರ ಗಮನವೂ ಇದೇ ವ್ಯಕ್ತಿಯ ಮೇಲಿತ್ತು. ಎದುರಿನ ಸೀಟಿನ ಮೇಲೆ ಕುಳಿತಿದ್ದ ಬಂಗಾಳಿ ಗಂಡ-ಹೆಂಡತಿ ಪದೇ ಪದೇ ಆತನನ್ನೇ ನೋಡುತ್ತಿದ್ದರು. ಅವರ ಪುಟ್ಟ ಮಗಳಂತೂ ಆತ ಪಾನ್ ಜಗಿಯುತ್ತಿರುವುದನ್ನು ನೋಡಿ ನಗತೊಡಗಿದ್ದಳು. ಮೇಲಿನ ಬರ್ತ್‌ನಲ್ಲಿ ಕುಳಿತ ವ್ಯಕ್ತಿಯೊಬ್ಬ ಸಿಗರೇಟು ಸೇದುತ್ತಿದ್ದ. ಇನ್ನೊಂದು ಸೀಟಿನಲ್ಲಿ ಕುಳಿತಿದ್ದ ಮೌಲ್ವಿಯ ಕಣ್ಣುಗಳು ಸ್ವಲ್ಪ ಕೆಂಪಾಗಿತ್ತು.

ನನ್ನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ ಕಿಟಕಿಯ ಹೊರಕ್ಕೆ ತಲೆಯನ್ನು ತೂರಿಸಿ, ಎಂಜಲು ಉಗುಳುವುದಕ್ಕೆ ಮುಂದಾದ. ಬಹುಶಃ ಆತನಿಗೆ ಅಮರ್ ಸಿಂಗ್ ಹೇಳಿದ ಮಾತುಗಳು ಮತ್ತೆ ನೆನಪಾದವೋ ಏನೋ! ಆತ ನನ್ನನ್ನು ಪ್ರಶ್ನಿಸಿದ, "ನಿಮಗೆ ಗೊತ್ತೇ..." ನನ್ನಿಂದ ಯಾವುದೋ ಉತ್ತರವನ್ನು ನಿರೀಕ್ಷಿಸುವ ರೀತಿಯಲ್ಲಿ ಕೆಂಪಾಗಿದ್ದ ತುಟಿಗಳ ಮೇಲೆ ನಗು ಬೀರಿ ನನ್ನ ಕಣ್ಣುಗಳನ್ನೇ ದಿಟ್ಟಿಸತೊಡಗಿದ.

ಆತ ಕೇಳಿದ್ದು ಏನು ಎನ್ನುವುದು ನನಗೆ ಅರ್ಥವಾಗಿರಲಿಲ್ಲ. ಆತ ನನ್ನಿಂದ ಯಾವುದರ ಉತ್ತರವನ್ನು ನಿರೀಕ್ಷಿಸುತ್ತಿದ್ದಾನೆ ಎನ್ನುವುದು ಗೊತ್ತಾಗದೇ ಪ್ರತಿಕ್ರಿಯಿಸಿದೆ, "ಇಲ್ಲ... ಗೊತ್ತಿಲ್ಲ..."

"ಅಮರ್ ಸಿಂಗ್ ಒಂದು ಚಿಕ್ಕ ಕಾದಂಬರಿಯನ್ನು ಬರೆದಿದ್ದಾರೆ. ನಿನ್ನೆ... ಅಲ್ಲಲ್ಲ... ಮೂರು ದಿನಗಳ ಹಿಂದೆ ಅವರು ಅದನ್ನು ಬರೆದು ಮುಗಿಸಿದ್ದಾರೆ. ವಿಶೇಷವೇನು ಗೊತ್ತಾ... ಕೇವಲ ಎರಡೇ ಎರಡು ದಿನಗಳಲ್ಲಿ ಅವರು ಅದನ್ನು ಬರೆದಿದ್ದಾರೆ! ಗೊತ್ತಲ್ಲಾ ಅವರು ಬರೆಯುವುದೆಲ್ಲಾ ಹಿಂದಿಯಲ್ಲಿ... ಅಂದಹಾಗೆ ಆ ಕಾದಂಬರಿಗೆ ಹೆಸರು ಏನು ಇಟ್ಟಿದ್ದಾರೆ ಗೊತ್ತಾ? ಹ್ಞಾ... 'ಕಾಬೂಲಿ.' ಹೇಗಿದೆ ಹೆಸರು? ತುಂಬಾ ಚೆನ್ನಾಗಿದೆಯಲ್ಲವಾ?"

ನಾನು ಕುತ್ತಿಗೆಯನ್ನು ಅಲುಗಾಡಿಸುತ್ತ "ಹ್ಞಾ..." ಎಂದಷ್ಟೇ ಹೇಳಿದೆ.

ನಾನು ಮುಂದಿನ ಇನ್ನೊಂದು ಶಬ್ದವನ್ನು ಹೊರಹಾಕುವುದಕ್ಕಿಂತ ಮೊದಲೇ ಆತ ತನ್ನ ಮಾತನ್ನು ಮುಂದುವರಿಸಿದ, "ನಿಮಗೆ ಆ ಹೆಸರು ಇಷ್ಟವಾಯಿತಲ್ವಾ? ನಿಜವಾಗಿ? ಅವರಿಗೆ ನಾನು ಈ ವಿಷಯ ಹೇಳಿದರೆ ಅವರು ತುಂಬಾ ಸಂತೋಷಪಡುತ್ತಾರೆ. ನಾಳೆಯೇ ಅವರನ್ನು ಭೇಟಿಯಾಗಿ ಹೇಳಿಬಿಡುತ್ತೇನೆ. ಅಂದಹಾಗೆ ಇದರ ಕಥಾವಸ್ತು ಏನು ಗೊತ್ತೇ? ಅತ್ಯಂತ ವಿಶಿಷ್ಟವಾಗಿದೆ. ಒಬ್ಬಳು ಹುಡುಗಿ... ಆಕೆ ಒಂದೇ ಶಬ್ದವನ್ನೂ